
# ಎನ್‌ಪಿಎಸ್ ರದ್ದತಿಗೆ ಪರಿಷತ್ತಿನಲ್ಲಿ ಪಟ್ಟು

## ನೂತನ ಪಿಂಚಣಿ ಯೋಜನೆಯು ನೌಕರರ ಬದುಕಿಗೆ ಆಘಾತಕಾರಿ



ಸರಕಾರಿ ನೌಕರರ ನಿವೃತ್ತಿ ಬದುಕಿಗೆ ಭದ್ರತೆ ನೀಡದ ನೂತನ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆಯನ್ನೇ(ಒಪಿಎಸ್) ಜಾರಿಗೊಳಿಸಬೇಕೆಂದು ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರು ಒಕ್ಕೊರಲಿನಿಂದ ಒತ್ತಾಯಿಸಿದ ಘಟನೆಗೆ ಪರಿಷತ್ ಕಲಾಪವು ಸಾಕ್ಷಿಯಾಯಿತು.

ಶುಕ್ರವಾರ ಗಮನ ಸೆಳೆಯುವ ಸೂಚನೆ ಮೇಲಿನ ಚರ್ಚೆ ವೇಳೆ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ, "2006ರ ಏ. 1ರ ನಂತರ ನೇಮಕವಾದ ಶಿಕ್ಷಕರು, ಎಲ್ಲ ಸರಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆ ಜಾರಿಗೊಳಿಸಲಾಗಿದೆ. ಪಿಂಚಣಿಯ ವಂತಿಗೆಯನ್ನು ಲಾಭದಾಯಕ ಉದ್ಯಮಗಳಲ್ಲಿ ಹೂಡಿಕೆ ಮಾಡಿ, ನಿವೃತ್ತಿಯಾದಾಗ ದೊಡ್ಡ ಮೊತ್ತವನ್ನು ನೀಡಲಾಗುವುದೆಂದು ಸರಕಾರಗಳು ಹೇಳಿದ ಬಣ್ಣ ಬಣ್ಣದ ಮಾತುಗಳಿಗೆ ನೌಕರರು ಖುಷಿಯಾಗಿ ಎನ್‌ಪಿಎಸ್ ಅನ್ನು ಸ್ವಾಗತಿಸಿದರು. ಆದರೆ, ನಿವೃತ್ತಿಗೆ ಪಿಂಚಣಿ ಸಿಗದಂತಾಗಿದ್ದು, ಹಲವರು ಸಂಕಷ್ಟಕ್ಕೆ ಸಿಲುಕಿದ್ದಾರೆ," ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಶಾಸಕ, ಸಂಸದರಿಗೆ ಏಕೆ ಅನ್ವಯಿಸಲ್ಲ**

ಬಿಜೆಪಿಯ ಆಯನೂರು ಮಂಜುನಾಥ್ ಮಾತನಾಡಿ, "2006ರ ಬಳಿಕ ಆಯ್ಕೆಯಾದ ಶಾಸಕರು, ಸಂಸದರನ್ನೇಕೆ ಎನ್‌ಪಿಎಸ್‌ನಿಂದ ಹೊರಗಿಟ್ಟು, ಹಳೆ ಪಿಂಚಣಿ ಯೋಜನೆ ಮುಂದುವರಿಸಲಾಗಿದೆ. ಕೇವಲ ಒಂದೆರಡು ವರ್ಷ ಜನಪ್ರತಿನಿಧಿಯಾಗಿದ್ದರೂ ಶಾಶ್ವತ ಪಿಂಚಣಿ ದೊರಕುತ್ತದೆ. ಶಾಸಕರು ಮಾತ್ರ ಮನುಷ್ಯರೇ? ನೌಕರರು ಮನುಷ್ಯರಲ್ಲವೇ," ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಯ ವೈ.ಎ.ನಾರಾಯಣಸ್ವಾಮಿ, "ನಿವೃತ್ತಿ ಅಂಚಿನಲ್ಲಿದ್ದಾಗ 84 ಸಾವಿರ ರೂ. ಸಂಬಳ ಪಡೆಯುತ್ತಿದ್ದ ನೌಕರರೊಬ್ಬರು ಜೀವನ ನಿರ್ವಹಣೆಗಾಗಿ 10 ಸಾವಿರ ರೂ. ಕೊಡುವ ಕೆಲಸ ಕೊಡಿಸಿ ಎಂದು ಮನೆ ಬಳಿ ಬಂದಿದ್ದರು. ಇಂಥ ಪರಿಸ್ಥಿತಿ ಯಾರಿಗೂ ಬರುವುದು ಬೇಡ. ಎನ್‌ಪಿಎಸ್ ಎಂದರೆ 'ನೋ ಪೆನ್ಷನ್ ಸ್ಕೀಂ' ಎಂಬಂತಾಗಿದೆ. ಅನುದಾನಿತ ಶಾಲೆಗಳ ಶಿಕ್ಷಕರ ಪರಿಸ್ಥಿತಿಯಂತೂ ತುಂಬಾ ಶೋಚನೀಯವಾಗಿದೆ," ಎಂದು ಹೇಳಿದರು.

**ವರದಿ ಆಧರಿಸಿ ಸೂಕ್ತ ಕ್ರಮ**

ಸಿಎಂ ಪರವಾಗಿ ಉತ್ತರ ನೀಡಿದ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, "ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ, ಮಾರ್ಪಾಡು ಮಾಡಲು 2018ರ ಡಿ. 11ರಂದು ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಸಮಿತಿ ನೀಡುವ ವರದಿ ಆಧರಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು," ಎಂದು ಭರವಸೆ ನೀಡಿದರು.

ಶಿಕ್ಷಕರೂ ಸೇರಿದಂತೆ ಎಲ್ಲ ನೌಕರರು ಹಳೆಯ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸುತ್ತಲೇ ಇದ್ದಾರೆ. ಹಾಗಾಗಿ, ಮೊಸಳೆ ಕಣ್ಣೀರು ಹಾಕದೆ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು.

**-ಎಸ್.ಎಲ್.ಭೋಜೇಗೌಡ**

ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ, ಮಾರ್ಪಾಡಿಗೆ ರಚಿಸಿರುವ ಸಮಿತಿಯಿಂದ ವರದಿ ಪಡೆದು ಆದಷ್ಟು ಶೀಘ್ರವಾಗಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು.

**-ಎಸ್.ವಿ.ಸಂಕನೂರ**

ಕೆಲ ಆಡಳಿತ ಮಂಡಳಿಗಳು ದುಡ್ಡು ಕೊಟ್ಟವರಿಗಷ್ಟೇ ವೇತನ ಪಾವತಿ ಮಾಡುತ್ತಿವೆ. ಪಿಂಚಣಿ ವಂತಿಗೆಯನ್ನೂ ಭರಿಸುತ್ತಿಲ್ಲ. ಎನ್‌ಪಿಎಸ್ ಎಂದರೆ 'ನೋ ಪೆನ್ಷನ್ ಸ್ಕೀಂ' ಎಂಬಂತಾಗಿದೆ.

**-ವೈ.ಎ.ನಾರಾಯಣಸ್ವಾಮಿ**